**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತೊಂದನೆಯ ಅಧಿವೇಶನ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2023

**(2023ರ ವಿಧಾನಸಭೆಯ ವಿಧೇಯಕ ಸಂಖ್ಯೆ–24)**

**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020 ಮತ್ತು ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ 53)ನ್ನು ಮತ್ತು ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾನ್ಲಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು, ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2023 ಎಂದು ಕರೆಯತಕ್ಕದ್ದು.

(2) 2ನೇ ಮತ್ತು 3ನೇ ಪ್ರಕರಣಗಳ ಉಪಬಂಧಗಳು ಅನುಕ್ರಮವಾಗಿ 11.01.2021 ಮತ್ತು 04.09.2015 ರಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. 2020ರ ಕರ್ನಾಟಕ ಅಧಿನಿಯಮ 53ರ ತಿದ್ದುಪಡಿ.-** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ 53)ರಲ್ಲಿನ,-

(i) 2ನೇ ಪ್ರಕರಣದಲ್ಲಿ,-

(ಎ) (26)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(26ಎ) "ನೆಲ ಬಾಡಿಗೆ" ಎಂಬುದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಒದಗಿಸಲಾದ ಮತ್ತು ನಿರ್ವಹಿಸಲಾದ ಸಾರ್ವಜನಿಕ ರಸ್ತೆಗಳು ಮತ್ತು ಇತರ ಮೂಲಭೂತ ಸೌಕರ್ಯಗಳ ಹಾಗೂ ನಿರ್ಮಾಣದ ಅವಧಿಯಲ್ಲಿ ಉಂಟಾಗುವ ಕಸಕಡ್ಡಿಗಳ ಬಳಕೆಗಾಗಿನ ಶುಲ್ಕಗಳನ್ನು ಒಳಗೊಳ್ಳುವುದು, ಆದರೆ ಸಾರ್ವಜನಿಕ ರಸ್ತೆ ಅಥವಾ ಪಾದಚಾರಿ ಮಾರ್ಗದ ಅಧಿಬೋಗದ ಹಕ್ಕನ್ನು ನೀಡತಕ್ಕದ್ದಲ್ಲ;

(26ಬಿ) "ಮಾರ್ಗಸೂಚಿ ಮೌಲ್ಯ" ಎಂದರೆ ಕರ್ನಾಟಕ ಸ್ಟಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿಯಲ್ಲಿ ನಿರ್ದಿಷ್ಟಪಡಿಸಲಾದಂತೆ ಖಾಲಿ ನಿವೇಶನದ ಮಾರುಕಟ್ಟೆ ಮೌಲ್ಯ;"

(ಬಿ) (49)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(49ಎ) "ಪರಿಶೀಲನಾ ಶುಲ್ಕ" ಎಂದರೆ ಕಟ್ಟಡ ನಿರ್ಮಾಣ ಅನುಮತಿ ಅರ್ಜಿಯ ಪರಿಶೀಲನೆಗಾಗಿ (processing) ಸಿಬ್ಬಂದಿ ವೆಚ್ಚಗಳನ್ನು ಭರಿಸಲು ಸಂಗ್ರಹಿಸಲಾಗುವ ಶುಲ್ಕ;"

(ii) ಅಧ್ಯಾಯ XIIIರ ಶೀರ್ಷಿಕೆಯಲ್ಲಿ "ತೆರಿಗೆಗಳು" ಎಂಬ ಪದಗಳ ತರುವಾಯ ",ಶುಲ್ಕ, ಲೆವಿ, ಛಾರ್ಜು ಮತ್ತು ಬೇಡಿಕೆ" ಎಂಬ ಅಲ್ಪವಿರಾಮ ಚಿಹ್ನೆ ಮತ್ತು ಪದಗಳನ್ನು ಸೇರಿಸತಕ್ಕದ್ದು.

(iii) 142ನೇ ಪ್ರಕರಣದಲ್ಲಿ,-

(**ಎ**) ಶೀರ್ಷಿಕೆಯಲ್ಲಿ "ತೆರಿಗೆಗಳು" ಎಂಬ ಪದಗಳ ತರುವಾಯ ",ಶುಲ್ಕ, ಲೆವಿ, ಛಾರ್ಜು ಮತ್ತು ಬೇಡಿಕೆ ಅಥವಾ ಇನ್ನಾವುದೇ ಹೆಸರಿನಿಂದ ಕರೆಯಲಾಗುವಂತದು" ಎಂಬ ಅಲ್ಪವಿರಾಮ ಚಿಹ್ನೆ ಮತ್ತು ಪದಗಳನ್ನು ಸೇರಿಸತಕ್ಕದ್ದು.

(**ಬಿ**) (1)ನೇ ಉಪಪ್ರಕರಣದಲ್ಲಿ,-

(ಎ) "ನಿರ್ದಿಷ್ಟಪಡಿಸಿದಂಥ ದರಗಳನ್ನು ಮೀರದಂತೆ ಈ ಮುಂದಿನ ತೆರಿಗೆಗಳನ್ನು" ಎಂಬ ಪದಗಳ ಬದಲಿಗೆ "ನಿರ್ದಿಷ್ಟಪಡಿಸಿದ ಈ ಮುಂದಿನ ತೆರಿಗೆಗಳು, ಶುಲ್ಕ, ಲೆವಿ, ಛಾರ್ಜು ಮತ್ತು ಬೇಡಿಕೆ ಅಥವಾ ಇನ್ನಾವುದೇ ಹೆಸರಿನಿಂದ ಕರೆಯಲಾಗುವಂಥ ದರಗಳಲ್ಲಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) (ಡಿ) ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಡಿ-i) ಕಟ್ಟಡ ನಿರ್ಮಾಣಗಳಿಗೆ ಅನುಮತಿ ನೀಡುವುದಕ್ಕಾಗಿ ಯಾವುದೇ ಶುಲ್ಕ ಅಥವಾ ಲೆವಿ ಅಥವಾ ಬೇಡಿಕೆ ಅಥವಾ ಛಾರ್ಜು."

(iv) 240ಎ ಪ್ರಕರಣದ (3)ನೇ ಉಪಪ್ರಕರಣದ **(ಎ)** ಖಂಡದಲ್ಲಿನ (ಎ), (ಬಿ), (ಸಿ), (ಡಿ), (ಇ) ಮತ್ತು (ಎಫ್) ಉಪಖಂಡಗಳ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎ) ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿಯಲ್ಲಿ ಖಾಲಿ ನಿವೇಶನದ ಮಾರ್ಗಸೂಚಿ ಮೌಲ್ಯದ ಶೇಕಡ 0.30 ರೊಂದಿಗೆ, ಪ್ರಸ್ತಾವಿತ ಕಟ್ಟಡ ನಿರ್ಮಾಣ ವಿಸ್ತೀರ್ಣವನ್ನು ಗುಣಿಸಿ ಅದನ್ನು ಮೀರದಂಥ ದರದಲ್ಲಿ ಲೈಸನ್ಸ್ ಅನ್ನು ನೀಡುವುದಕ್ಕಾಗಿ ಶುಲ್ಕ;

(ಬಿ) ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿಯಲ್ಲಿ ಖಾಲಿ ನಿವೇಶನದ ಮಾರ್ಗಸೂಚಿ ಮೌಲ್ಯದ ಶೇಕಡ 0.25 ರೊಂದಿಗೆ, ಪ್ರಸ್ತಾವಿತ ಕಟ್ಟಡ ನಿರ್ಮಾಣ ವಿಸ್ತೀರ್ಣವನ್ನು ಗುಣಿಸಿ ಅದನ್ನು ಮೀರದಂಥ ದರದಲ್ಲಿ ಸಾರ್ವಜನಿಕ ರಸ್ತೆಗಳ ನಿರ್ವಹಣೆಗಾಗಿ ಅಥವಾ ಕಟ್ಟಡ ನಿರ್ಮಾಣದ ಅವಧಿಯಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ನಿರ್ಮಾಣ ಸಾಮಗ್ರಿಗಳನ್ನು ಸಂಗ್ರಹಿಸುವುದಕ್ಕಾಗಿ ಶುಲ್ಕ ಎಂದರೆ., ನೆಲಬಾಡಿಗೆ;

(ಸಿ) ಮಂಜೂರಾದ ನಕ್ಷೆಗನುಸಾರವಾಗಿ(Plan) ನಿರ್ಮಾಣವನ್ನು ಖಚಿತಪಡಿಸಿಕೊಳ್ಳಲು ವಲಯ ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದಂತೆ ಭದ್ರತಾ ಶುಲ್ಕ ಠೇವಣಿ;

(ಡಿ) ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿಯಲ್ಲಿ ಖಾಲಿ ನಿವೇಶನದ ಮಾರ್ಗಸೂಚಿ ಮೌಲ್ಯದ ಶೇಕಡ 0.20 ರೊಂದಿಗೆ, ಪ್ರಸ್ತಾವಿತ ಮೇಲ್ಛಾವಣಿ (plinth) ವಿಸ್ತೀರ್ಣವನ್ನು ಗುಣಿಸಿ ಅದನ್ನು ಮೀರದಂಥ ದರದಲ್ಲಿ ಪ್ರಾರಂಭ ಪ್ರಮಾಣ ಪತ್ರಕ್ಕಾಗಿ ಶುಲ್ಕ;

(ಇ) ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿಯಲ್ಲಿ ಖಾಲಿ ನಿವೇಶನದ ಮಾರ್ಗಸೂಚಿ ಮೌಲ್ಯದ ಶೇಕಡ 1.0 ರೊಂದಿಗೆ, ಪ್ರಸ್ತಾವಿತ ಕಟ್ಟಡ ನಿರ್ಮಾಣ ವಿಸ್ತೀರ್ಣವನ್ನು ಗುಣಿಸಿ ಅದನ್ನು ಮೀರದಂಥ ದರದಲ್ಲಿ ಪೂರ್ಣಗೊಳಿಸಿದ ಪ್ರಮಾಣ ಪತ್ರಕ್ಕಾಗಿ ಶುಲ್ಕ;

(ಎಫ್) ಈ ಅಧಿನಿಯಮ ಮತ್ತು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರಡಿಯಲ್ಲಿ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಡಿಯಲ್ಲಿ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಇತರ ಶುಲ್ಕ;

(ಜಿ) ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿಯಲ್ಲಿ ಖಾಲಿ ನಿವೇಶನದ ಮಾರ್ಗಸೂಚಿ ಮೌಲ್ಯದ ಶೇಕಡ 0.10 ರೊಂದಿಗೆ, ಪ್ರಸ್ತಾವಿತ ಕಟ್ಟಡ ನಿರ್ಮಾಣ ವಿಸ್ತೀರ್ಣವನ್ನು ಗುಣಿಸಿ ಅದನ್ನು ಮೀರದಂಥ ದರದಲ್ಲಿ ಪರಿಶೀಲನಾ ಶುಲ್ಕ;

(ಎಚ್) ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿಯಲ್ಲಿ ಖಾಲಿ ನಿವೇಶನದ ಮಾರ್ಗಸೂಚಿ ಮೌಲ್ಯದ ಶೇಕಡ 0.25 ರೊಂದಿಗೆ, ಪ್ರಸ್ತಾವಿತ ಕಟ್ಟಡ ನಿರ್ಮಾಣ ವಿಸ್ತೀರ್ಣವನ್ನು ಗುಣಿಸಿ ಅದನ್ನು ಮೀರದಂಥ ದರದಲ್ಲಿ ನಿರ್ಮಾಣದ ಪ್ರಾರಂಭದಲ್ಲಿ ಪ್ರಾರಂಭ ಪ್ರಮಾಣ ಪತ್ರವನ್ನು ಪಡೆಯದಿದ್ದರೆ ಪೂರ್ಣಗೊಳಿಸಿದ ಪ್ರಮಾಣ ಪತ್ರವನ್ನು ನೀಡುವ ಸಮಯದಲ್ಲಿ ವಿದಿಸುವ ದಂಡ;

(ಐ) ಅಧಿನಿಯಮದಡಿಯಲ್ಲಿ ಅನುಮತಿಸಲಾದ ವ್ಯಾಪ್ತಿಯವರೆಗೆ ನಿರ್ಮಾಣವನ್ನು ಉಲ್ಲಂಘಿಸಿದ ಅಥವಾ ವ್ಯತ್ಯಾಸಗೊಳಿಸಿದ ಭಾಗದ ಸಕ್ರಮಾತಿಗಾಗಿ ನಿವೇಶನದ ಉಲ್ಲಂಘಿತ ಭಾಗಕ್ಕೆ ಮಾರ್ಗಸೂಚಿ ಮೌಲ್ಯದ ಶೇಕಡ 35ರಷ್ಟನ್ನು ಮೀರದಂಥ ದರದಲ್ಲಿ ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿಯಲ್ಲಿ ದಂಡ; ಮತ್ತು

(ಜೆ) ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಇತರ ಶುಲ್ಕ."

**3. 1977ರ ಕರ್ನಾಟಕ ಅಧಿನಿಯಮ ಸಂಖ್ಯೆ 14ರ ತಿದ್ದುಪಡಿ.-** ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರಲ್ಲಿ,-

(i) 2ನೇ ಪ್ರಕರಣದಲ್ಲಿ,-

(ಎ) (13)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(13ಎ) "ನೆಲ ಬಾಡಿಗೆ" ಎಂಬುದು ಪಾಲಿಕೆಯಿಂದ ಒದಗಿಸಲಾದ ಮತ್ತು ನಿರ್ವಹಿಸಲಾದ ಸಾರ್ವಜನಿಕ ರಸ್ತೆಗಳು ಮತ್ತು ಇತರ ಮೂಲಭೂತ ಸೌಕರ್ಯಗಳ ಹಾಗೂ ನಿರ್ಮಾಣದ ಅವಧಿಯಲ್ಲಿ ಉಂಟಾಗುವ ಕಸಕಡ್ಡಿಗಳ ಬಳಕೆಗಾಗಿನ ಶುಲ್ಕಗಳನ್ನು ಒಳಗೊಳ್ಳುವುದು, ಆದರೆ ಸಾರ್ವಜನಿಕ ರಸ್ತೆ ಅಥವಾ ಪಾದಚಾರಿ ಮಾರ್ಗದ ಅಧಿಭೋಗದ ಹಕ್ಕನ್ನು ನೀಡತಕ್ಕದ್ದಲ್ಲ;

(13ಬಿ) “ಮಾರ್ಗಸೂಚಿ ಮೌಲ್ಯ” ಎಂದರೆ ಕರ್ನಾಟಕ ಸ್ಟಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿಯಲ್ಲಿ ನಿರ್ದಿಷ್ಟಪಡಿಸಲಾದಂತೆ ಖಾಲಿ ನಿವೇಶನದ ಮಾರುಕಟ್ಟೆ ಮೌಲ್ಯ;”

(ಬಿ) (37)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

“(37ಎ) “ಪರಿಶೀಲನಾ ಶುಲ್ಕ” ಎಂದರೆ ಕಟ್ಟಡ ನಿರ್ಮಾಣ ಅನುಮತಿ ಅರ್ಜಿಯ ಪರಿಶೀಲನೆಗಾಗಿ (processing) ಸಿಬ್ಬಂದಿ ವೆಚ್ಚಗಳನ್ನು ಭರಿಸಲು ಸಂಗ್ರಹಿಸಲಾಗುವ ಶುಲ್ಕ;”

(ii) ಅಧ್ಯಾಯ XVರ ಶೀರ್ಷಿಕೆಯಲ್ಲಿ “**ಕಟ್ಟಡಗಳ ನಿಯಂತ್ರಣ ಸಾಮಾನ್ಯ ಅಧಿಕಾರಗಳು**” ಎಂಬ ಪದಗಳಿಗೆ ಮೊದಲು “ನಗರ ಯೋಜನೆಯನ್ನು ಒಳಗೊಂಡಂತೆ ” ಎಂಬ ಪದಗಳನ್ನು ಸೇರಿಸತಕ್ಕದ್ದು.

(iii) 299ಎ ಪ್ರಕರಣದ(2)ನೇ ಉಪಪ್ರಕರಣದಲ್ಲಿ,-

(ಎ) “ಮಾರ್ಗಸೂಚಿ ಮೌಲ್ಯವನ್ನಾಧರಿಸಿದಂಥ" ಎಂಬ ಪದಗಳಿಗೆ ಮೊದಲು "ಖಾಲಿ ನಿವೇಶನದ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) ಉಪಖಂಡಗಳಾದ (ಎ), (ಬಿ), (ಸಿ), (ಡಿ), (ಇ), (ಎಫ್), (ಜಿ), (ಎಚ್) ಮತ್ತು (ಐ) ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

“(ಎ) ಕರ್ನಾಟಕ ಸ್ಟಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿಯಲ್ಲಿ ಖಾಲಿ ನಿವೇಶನದ ಮಾರ್ಗಸೂಚಿ ಮೌಲ್ಯದ ಶೇಕಡ 0.30 ರೊಂದಿಗೆ, ಪ್ರಸ್ತಾವಿತ ಕಟ್ಟಡ ನಿರ್ಮಾಣ ವಿಸ್ತೀರ್ಣವನ್ನು ಗುಣಿಸಿ ಅದನ್ನು ಮೀರದಂಥ ದರದಲ್ಲಿ ಲೈಸನ್ಸ್ ಅನ್ನು ನೀಡುವುದಕ್ಕಾಗಿ ಶುಲ್ಕ;

(ಬಿ) ಕರ್ನಾಟಕ ಸ್ಟಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿಯಲ್ಲಿ ಖಾಲಿ ನಿವೇಶನದ ಮಾರ್ಗಸೂಚಿ ಮೌಲ್ಯದ ಶೇಕಡ 0.10 ರೊಂದಿಗೆ, ಪ್ರಸ್ತಾವಿತ ಕಟ್ಟಡ ನಿರ್ಮಾಣ ವಿಸ್ತೀರ್ಣವನ್ನು ಗುಣಿಸಿ ಅದನ್ನು ಮೀರದಂಥ ದರದಲ್ಲಿ ಪರಿಶೀಲನಾ ಶುಲ್ಕ;

(ಸಿ) ಕರ್ನಾಟಕ ಸ್ಟಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿಯಲ್ಲಿ ಖಾಲಿ ನಿವೇಶನದ ಮಾರ್ಗಸೂಚಿ ಮೌಲ್ಯದ ಶೇಕಡ 0.25 ರೊಂದಿಗೆ, ಪ್ರಸ್ತಾವಿತ ಕಟ್ಟಡ ನಿರ್ಮಾಣ ವಿಸ್ತೀರ್ಣವನ್ನು ಗುಣಿಸಿ ಅದನ್ನು ಮೀರದಂಥ ದರದಲ್ಲಿ ಸಾರ್ವಜನಿಕ ರಸ್ತೆಗಳ ನಿರ್ವಹಣೆಗಾಗಿ ಅಥವಾ ಕಟ್ಟಡ ನಿರ್ಮಾಣದ ಅವಧಿಯಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ನಿರ್ಮಾಣ ಸಾಮಗ್ರಿಗಳನ್ನು ಸಂಗ್ರಹಿಸುವುದಕ್ಕಾಗಿ ಹಾಗೂ ನಿರ್ಮಾಣದ ಅವಧಿಯಲ್ಲಿ ಉಂಟಾಗುವ ಕಸಕಡ್ಡಿಗಳ ಬಳಕೆಗಾಗಿನ ಶುಲ್ಕ ಎಂದರೆ., ನೆಲಬಾಡಿಗೆ;

(ಡಿ) ಮಂಜೂರಾದ ನಕ್ಷೆಗನುಸಾರವಾಗಿ ನಿರ್ಮಾಣವನ್ನು ಖಚಿತಪಡಿಸಿಕೊಳ್ಳಲು ವಲಯ ವಿನಿಮಯಗಳಲ್ಲಿ ನಿರ್ದಿಷ್ಟಪಡಿಸಿದಂತೆ ಭದ್ರತಾ ಶುಲ್ಕ ಠೇವಣಿ;

(ಇ) ಕರ್ನಾಟಕ ಸ್ಟಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿಯಲ್ಲಿ ಖಾಲಿ ನಿವೇಶನದ ಮಾರ್ಗಸೂಚಿ ಮೌಲ್ಯದ ಶೇಕಡ 0.20 ರೊಂದಿಗೆ, ಪ್ರಸ್ತಾವಿತ ಮೇಲ್ಪಾಯ (plinth) ವಿಸ್ತೀರ್ಣವನ್ನು ಗುಣಿಸಿ ಅದನ್ನು ಮೀರದಂಥ ದರದಲ್ಲಿ ಪ್ರಾರಂಭ ಪ್ರಮಾಣ ಪತ್ರಕ್ಕಾಗಿ ಶುಲ್ಕ;

(ಎಫ್) ಕರ್ನಾಟಕ ಸ್ಟಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿಯಲ್ಲಿ ಖಾಲಿ ನಿವೇಶನದ ಮಾರ್ಗಸೂಚಿ ಮೌಲ್ಯದ ಶೇಕಡ 1.0 ರೊಂದಿಗೆ, ಪ್ರಸ್ತಾವಿತ ಕಟ್ಟಡ ನಿರ್ಮಾಣ ವಿಸ್ತೀರ್ಣವನ್ನು ಗುಣಿಸಿ ಅದನ್ನು ಮೀರದಂಥ ದರದಲ್ಲಿ ಸ್ವಾಧೀನ ಪ್ರಮಾಣ ಪತ್ರಕ್ಕಾಗಿ ಶುಲ್ಕ;

(ಜಿ) ಕರ್ನಾಟಕ ಸ್ಟಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿಯಲ್ಲಿ ಖಾಲಿ ನಿವೇಶನದ ಮಾರ್ಗಸೂಚಿ ಮೌಲ್ಯದ ಶೇಕಡ 0.25 ರೊಂದಿಗೆ, ನಿರ್ಮಾಣ ಮಾಡಿದ ಕಟ್ಟಡ ವಿಸ್ತೀರ್ಣವನ್ನು ಗುಣಿಸಿ ಅದನ್ನು ಮೀರದಂಥ ದರದಲ್ಲಿ ನಿರ್ಮಾಣದ ಪ್ರಾರಂಭದಲ್ಲಿ ಪ್ರಾರಂಭ ಪ್ರಮಾಣ ಪತ್ರವನ್ನು ಪಡೆಯದಿದ್ದರೆ ಪೂರ್ಣಗೊಳಿಸಿದ ಪ್ರಮಾಣ ಪತ್ರವನ್ನು ನೀಡುವ ಸಮಯದಲ್ಲಿ ವಿಧಿಸುವ ದಂಡ;

(ಎಚ್) ಮಂಜೂರಾದ ನಕ್ಷೆಗೆಗೆ ಅಥವಾ ನಿರ್ದಿಷ್ಟಪಡಿಸಿದ ವಲಯ ವಿನಿಯಮಗಳ ಪರಿಮಿತಿಗೆ ಸಂಬಂಧಿಸಿದಂತೆ ನಿರ್ಮಾಣದ ಉಲ್ಲಂಘಿತ ಅಥವಾ ವ್ಯತ್ಯಾಸಗೊಳಿಸಿದ ಭಾಗದ ಶೇಕಡ 5ರಷ್ಟರವರೆಗಿನ ಸಕ್ರಮಾತಿಗಾಗಿ ಕರ್ನಾಟಕ ಸ್ಟಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿಯಲ್ಲಿ ಖಾಲಿ ನಿವೇಶನದ ಮಾರ್ಗಸೂಚಿ ಮೌಲ್ಯದ ಶೇಕಡ 35ರಷ್ಟನ್ನು ಉಲ್ಲಂಘಿತ ಭಾಗದೊಂದಿಗೆ ಗುಣಿಸಿ ಅದನ್ನು ಮೀರದಂಥ ದರದಲ್ಲಿ ದಂಡ; ಮತ್ತು

(ಐ) ಈ ಅಧಿನಿಯಮ ಮತ್ತು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11) ಹಾಗೂ ಅದರಡಿಯಲ್ಲಿ ರಚಿಸಿದ ನಿಯಮಗಳಡಿಯಲ್ಲಿ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಇತರ ಶುಲ್ಕ.”

**4. ತೆರಿಗೆ, ಉಪಕರ, ಶುಲ್ಕ ಇತ್ಯಾದಿಗಳ ವಿಧಿಸುವಿಕೆಯನ್ನು ಮತ್ತು ಸಂಗ್ರಹಣೆಯನ್ನು ಸಿಂಧುಗೊಳಿಸುವುದು.-** ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಕಟ್ಟಡ, ಖಾಲಿ ನಿವೇಶನ ಮುಂತಾದವುಗಳ ಮೇಲೆ ತೆರಿಗೆ, ಉಪಕರ, ಶುಲ್ಕ ಇತ್ಯಾದಿಗಳ ರೂಪದಲ್ಲಿ ಯಾವುದೇ ಮೊತ್ತದ ವಿಧಿಸುವಿಕೆ, ನಿರ್ಧರಣೆ ಅಥವಾ ಸಂಗ್ರಹಣೆಗೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2023ರ ಪ್ರಾರಂಭಕ್ಕೆ ಮೊದಲು ಮೂಲ ಅಧಿನಿಯಮ ಅಥವಾ ಯಾವುವೇ ನಿಯಮಗಳು, ಅಧಿಸೂಚನೆ, ಆದೇಶ, ಮಾರ್ಗಸೂಚಿಗಳು ಅಥವಾ ಪತ್ರಗಳ ಉಪಬಂಧಗಳ ಅಡಿಯಲ್ಲಿ ವಿಧಿಸಲಾದ ಅಥವಾ ವಿಧಿಸಲಾಗಿದೆಯೆಂದು ತಾತ್ಪರ್ಯವಾಗುವ ತೆರಿಗೆ, ಉಪಕರ, ಶುಲ್ಕ ಇತ್ಯಾದಿಗಳು ಮತ್ತು ಕೈಗೊಂಡ ಅಥವಾ ಮಾಡಿದ (ನೀಡಲಾದ ಯಾವು ನೋಟೀಸುಗಳು ಅಥವಾ ಆದೇಶಗಳು ಅಥವಾ ಮಾಡಿದ ಕರ ನಿರ್ಧರಣೆಯನ್ನು ಒಳಗೊಂಡು) ಯಾವುದೇ ಕ್ರಮ ಅಥವಾ ವಿಷಯವನ್ನು ಮತ್ತು ನಡೆಸಲಾದ ಎಲ್ಲಾ ವ್ಯವಹರಣೆಗಳನ್ನು ಹಾಗೂ ತೆರಿಗೆ, ಉಪಕರ, ಶುಲ್ಕ ಇತ್ಯಾದಿಗಳ ರೂಪದಲ್ಲಿ ಯಾವುದೇ ವಿಧಿಸುವಿಕೆ ಮತ್ತು ಸಂಗ್ರಹಿಸಲಾಗಿದೆ ಎಂದು ತಾತ್ಪರ್ಯವಾಗುವ ತೆರಿಗೆ, ಉಪಕರ, ಶುಲ್ಕ ಇತ್ಯಾದಿಗಳ ಸಂಗ್ರಹಣೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2023ರ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮಗಳ ಅಡಿಯಲ್ಲಿ ಮಾಡಲಾಗಿದ್ದರೆ, ಕ್ರಮ ಕೈಗೊಂಡಿದ್ದರೆ, ಕ್ರಮ ಕೈಗೊಳ್ಳಲಾಗಿದ್ದರೆ ಅಥವಾ ಮಾಡಿದ್ದರೆ ಹೇಗೋ ಹಾಗೆ ಎಲ್ಲಾ ಉದ್ದೇಶಗಳಿಗಾಗಿ ಸಿಂಧುವಾಗಿರತಕ್ಕದ್ದು ಮತ್ತು ಪರಿಣಾಮಕಾರಿಯಾಗಿರತಕ್ಕದ್ದು ಹಾಗೂ ಸಿಂಧುವಾಗಿದೆಯೆಂದು ಮತ್ತು ಪರಿಣಾಮಕಾರಿಯಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ:-

(ಎ) ಸರ್ಕಾರವು ಅಥವಾ ಸಂದರ್ಭಾನುಸಾರವಾಗಿ, ಪಾಲಿಕೆ ಅಧಿಕಾರಿಗಳು, ಎಲ್ಲಾ ಉದ್ದೇಶಗಳಿಗಾಗಿ ಶುಲ್ಕವಾಗಿ ಯಾವುದೇ ಮೊತ್ತದ ವಸೂಲಾತಿ, ನಿರ್ಧರಣೆ ಅಥವಾ ಸಂಗ್ರಹಣೆ ಸಂಬಂಧದಲ್ಲಿ ಕೈಗೊಂಡ ಎಲ್ಲಾ ಕ್ರಮಗಳು, ವ್ಯವಹರಣೆಗಳು ಅಥವಾ ವಿಷಯಗಳನ್ನು ಅಥವಾ ತೆಗೆದುಕೊಂಡ ಯಾವುದೇ ಕ್ರಮವನ್ನು, ಯಾವಾಗಲೂ ಕಾನೂನಿಗನುಸಾರವಾಗಿ ಮಾಡಲಾಗಿದೆ, ಕೈಗೊಳ್ಳಲಾಗಿದೆ ಅಥವಾ ತೆಗೆದುಕೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

(ಬಿ) ಅಂಥ ಯಾವುದೇ ಶುಲ್ಕದ ಮರುಸಂದಾಯಕ್ಕಾಗಿ ಯಾವುದೇ ನ್ಯಾಯಾಲಯದಲ್ಲಿ ಅಥವಾ ನ್ಯಾಯಾಧಿಕರಣದಲ್ಲಿ ಅಥವಾ ಯಾವುದೇ ಪ್ರಾಧಿಕಾರದ ಮುಂದೆ ಯಾವುದೇ ದಾವೆಯನ್ನು ಅಥವಾ ಇತರ ವ್ಯವಹರಣೆಯನ್ನು, ಹೂಡತಕ್ಕದ್ದಲ್ಲ ಅಥವಾ ಮುಂದುವರಿಸತಕ್ಕದ್ದಲ್ಲ; ಮತ್ತು

(ಸಿ) ಯಾವುದೇ ನ್ಯಾಯಾಲಯವು, ಯಾವುದೇ ಅಂಥ ಶುಲ್ಕದ ಮರುಸಂದಾಯವನ್ನು ನಿರ್ದೇಶಿಸಿ ಯಾವುದೇ ಡಿಕ್ರಿಯನ್ನು ಅಥವಾ ಆದೇಶವನ್ನು ಜಾರಿಗೊಳಿಸತಕ್ಕದಲ್ಲ."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
**(ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)**

ಕರ್ನಾಟಕ ಸ್ಟಾಂಪುಗಳ ಅಧಿನಿಯಮ, 1957ರ ಮೇರೆಗೆ ಮಾರ್ಗಸೂಚಿ ಮೌಲ್ಯಕ್ಕೆ ಸಂಬಂಧಿಸಿದಂತೆ ಉಪಕರದ ಪ್ರಮಾಣ, ಪರಿಶೀಲನಾ ಶುಲ್ಕ ಇತ್ಯಾದಿಗಳನ್ನು ನಿರ್ದಿಷ್ಟಪಡಿಸಲು ಮತ್ತು ಹಿಂದೆ ಉಪಕರ, ಪರಿಶೀಲನಾ ಶುಲ್ಕ ಇತ್ಯಾದಿಗಳನ್ನು ಸಂಗ್ರಹಿಸಿದನ್ನು ಸಿಂಧುಗಳಿಸಲು ಉಪಬಂಧ ಕಲ್ಪಿಸುವುದಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ 53) ಮತ್ತು ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ , ಈ ವಿಧೇಯಕ.

.

## **ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಹೆಚ್ಚಿನ ಆರ್ಥಿಕ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಡಿ.ಕೆ.ಶಿವಕುಮಾರ್**
ಉಪ ಮುಖ್ಯಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

**ಅನುಬಂಧ**

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020**

**(2020ರ ಕರ್ನಾಟಕ ಅಧಿನಿಯಮ 53) ರ ಉದ್ಧೃತ ಭಾಗ**

**XX XX XX**

**2. ಪರಿಭಾಷೆಗಳು.- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-**

**XX XX XX**

(49) "ಅನುಸೂಚಿತ ಬುಡಕಟ್ಟು" ಎಂದರೆ ಭಾರತ ಸಂವಿಧಾನ 342ನೇ ಅನುಚ್ಛೇದದ ಅಡಿಯಲ್ಲಿ ಅಧಿಸೂಚಿಸಿದ ಆ ಜಾತಿಗಳು, ಕುಲಗಳು ಅಥವಾ ಬುಡಕಟ್ಟುಗಳು ಅಥವಾ ಬುಡಕಟ್ಟು ಸಮುದಾಯದ ಅಥವಾ ಬುಡಕಟ್ಟುಗಳ ಒಳಗಿನ ಭಾಗಗಳು ಅಥವಾ ಕುಲಗಳೊಳಗಿನ ಬುಡಕಟ್ಟು ಸಮುದಾಯಗಳು ಅಥವಾ ಬುಡಕಟ್ಟುಗಳು;

**XX XX XX**

**ಅಧ್ಯಾಯ-** XIII

**ತೆರಿಗೆಗಳು**

**XX XX XX**

**142. ವಿಧಿಸಬಹುದಾದ ತೆರಿಗೆಗಳು**.- (1) ಸರ್ಕಾರದ ಸಾಮಾನ್ಯ ಮತ್ತು ವಿಶೇಷ ಆದೇಶಗಳಿಗೆ ಒಳಪಟ್ಟು, ಪಾಲಿ , ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದಂಥ ದರಗಳನ್ನು ಮೀರದಂತೆ ಈ ಮುಂದಿನ ತೆರಿಗೆಗಳನ್ನು ವಿಧಿಸಬಹುದು:

(ಎ) ಪಾಲಿಕೆಯ ವ್ಯಾಪ್ತಿಯಲ್ಲಿ ಇರುವ ಕಟ್ಟಡಗಳ ಅಥವಾ ಖಾಲಿ ಭೂಮಿ ಅಥವಾ ಎರಡರ ಮೇಲೆ ತೆರಿಗೆ;

(ಬಿ) ವೃತ್ತಿ, ವ್ಯಾಪಾರ, ಉದ್ಯೋಗಕ್ಕೆ ಕರಗಳು ಮತ್ತು ಉದ್ಯೋಗಗಳ ಮೇಲೆ ತೆರಿಗೆ;

(ಸಿ) ಮನರಂಜನಾ ಮತ್ತು ವಿನೋದ ಕಾರ್ಯಕ್ರಮಗಳ ಮೇಲೆ ತೆರಿಗೆ;

(ಡಿ) ಹೆಚ್ಚುವರಿ ಸ್ಟಾಂಪ್ ಸುಂಕದ ರೂಪದಲ್ಲಿ ಕೆಲವು ಸ್ವತ್ತುಗಳ ವರ್ಗಾವಣೆ ಮೇಲೆ ಸುಂಕ;

(ಇ) ಪಾಲಿಕೆಯು ತೆರಿಗೆ ನಿರ್ಧರಿಸಲು ಮತ್ತು ಸಂಗ್ರಹಿಸಲು ಕಾನೂನಿನ ಮೂಲಕ ಗೊತ್ತುಪಡಿಸಬಹುದಾಗಿರುವ ಯಾವುವೇ ಇತರ ತೆರಿಗೆಗಳು.

**XX XX XX**

**240ಎ. ಕರಗಳ ವಿಧಿಸುವಿಕೆ, ನಿರ್ಬಂಧ ಮತ್ತು ಷರತ್ತು.-**

**XX XX XX**

(3) ಮುಖ್ಯ ಆಯುಕ್ತನು, ನಕ್ಷೆಯನ್ನು ಅನುಮೋದಿಸುವುದಕ್ಕಾಗಿ ಅಥವಾ ಮಂಜೂರು ಮಾಡುವುದಕ್ಕಾಗಿ ಅಥವಾ ಪ್ರಾರಂಭ ಪ್ರಮಾಣಪತ್ರ ಅಥವಾ ಪೂರ್ಣಗೊಳಿಸಿದ ಪ್ರಮಾಣಪತ್ರ ನೀಡುವುದಕ್ಕಾಗಿ,-

**(ಎ)** ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ ಉಪಬಂಧಗಳ ಅಡಿಯಲ್ಲಿ ಸ್ಟಾಂಪು ಮತ್ತು ನೋಂದಣಿ ಇಲಾಖೆಯು ನಿಗದಿಪಡಿಸಿದ ಮಾರ್ಗಸೂಚಿ ಮೌಲ್ಯವನ್ನಾಧರಿಸಿದಂಥ ದರಗಳಲ್ಲಿ ಈ ಮುಂದಿನ ಶುಲ್ಕವನ್ನು ವಿಧಿಸಬಹುದು ಮತ್ತು ವಸೂಲು ಮಾಡಬಹುದು, ಎಂದರೆ:-

(ಎ) ಲೈಸೆನ್ಸ್ ನೀಡುವುದಕ್ಕಾಗಿ ಶುಲ್ಕ;

(ಬಿ) ನಿರ್ಮಾಣ ಅವಧಿಯಲ್ಲಿ ಸಾರ್ವಜನಿಕ ರಸ್ತೆಗಳ ನಿರ್ವಹಣೆಗಾಗಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ನಿರ್ಮಾಣ ಸಾಮಗ್ರಿಗಳ ಸಂಗ್ರಹಣೆಗಾಗಿ ಶುಲ್ಕ, ಎಂದರೆ, ನೆಲ ಬಾಡಿಗೆ;

(ಸಿ) ನಿರ್ಮಾಣವು ಮಂಜೂರಾದ ನಕ್ಷೆಗೆ ಅನುಸಾರವಾಗಿದೆ ಎಂಬುದನ್ನು ಖಚಿತಪಡಿಸಲು ಭದ್ರತಾ ಶುಲ್ಕ;

(ಡಿ) ಪ್ರಾರಂಭ ಪ್ರಮಾಣಪತ್ರಕ್ಕಾಗಿ ಶುಲ್ಕ;

(ಇ) ಪೂರ್ಣಗೊಳಿಸಿದ ಪ್ರಮಾಣಪತ್ರಕ್ಕಾಗಿ ಶುಲ್ಕ; ಮತ್ತು

(ಎಫ್) ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಇತರ ಶುಲ್ಕ.

**XX XX XX**

**ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976**

**(1977ರ ಕರ್ನಾಟಕ ಅಧಿನಿಯಮ 14) ರ ಉದ್ಧೃತ ಭಾಗ**

**XX XX XX**

**2. ಪರಿಭಾಷೆಗಳು.- XX XX XX**

(13) "ಸರ್ಕಾರ" ಎಂದರೆ, ರಾಜ್ಯಸರ್ಕಾರ;

**XX XX XX**

(37) "ಅನುಸೂಚಿತ ಬುಡಕಟ್ಟುಗಳು" ಎಂಬುದಕ್ಕೆ ಭಾರತದ ಸಂವಿಧಾನದಲ್ಲಿ ಇರುವ ಅರ್ಥವೇ ಇರತಕ್ಕದ್ದು;

**XX XX XX**

**299ಎ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಂಬಂಧದಲ್ಲಿ ಕರಗಳು, ನಿರ್ಬಂಧಗಳು ಮತ್ತು ಷರತ್ತುಗಳನ್ನು ವಿಧಿಸುವುದು.-** (1) ಆಯುಕ್ತನು, ವಲಯ ರಚನೆ ವಿನಿಯಮಗಳಲ್ಲಿ ಅಥವಾ ಕಟ್ಟಡ ಉಪ-ವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಭೂಮಿಯ ನಿವೇಶನ ನಕ್ಷೆ, ಭೂ ನಕ್ಷೆ, ಕಟ್ಟಡದ ಎತ್ತರಿಸುವಿಕೆಗಳು ಮತ್ತು ವಿಭಾಗದೊಂದಿಗೆ ಕಾಮಗಾರಿಯನ್ನು ಕಾರ್ಯಗತಗೊಳಿಸಲು ಅಂಥ ಅನುಮತಿಯನ್ನು ನೀಡಬಹುದು ಅಥವಾ ಆತನು, 303ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳಿಗೆ ಒಳಪಟ್ಟು ಅಂಥ ಲೈಸೆನ್ಸನ್ನು ನೀಡಲು ನಿರಾಕರಿಸಬಹುದು.

(2) ಆಯುಕ್ತನು, ನಕ್ಷೆಯನ್ನು ಅನುಮೋದಿಸಲು ಅಥವಾ ಮಂಜೂರು ಮಾಡಲು ಅಥವಾ ಪ್ರಾರಂಭ ಪ್ರಮಾಣಪತ್ರವನ್ನು ಅಥವಾ ಪೂರ್ಣಗೊಳಿಸಿದ ಪ್ರಮಾಣಪತ್ರವನ್ನು ನೀಡಲು, ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ರ ಉಪಬಂಧಗಳ ಅಡಿಯಲ್ಲಿ, ಸ್ಟ್ಯಾಂಪುಗಳು ಮತ್ತು ನೋಂದಣಿ ಇಲಾಖೆಯು ನಿಗದಿಪಡಿಸಿದ ಮಾರ್ಗಸೂಚಿ ಮೌಲ್ಯವನ್ನಾಧರಿಸಿದಂಥ ದರಗಳಲ್ಲಿ ಈ ಮುಂದಿನ ಶುಲ್ಕವನ್ನು ವಿಧಿಸಬಹುದು ಮತ್ತು ವಸೂಲು ಮಾಡಬಹುದು, ಎಂದರೆ:-

(ಎ) ಲೈಸೆನ್ಸ್ ನೀಡುವುದಕ್ಕಾಗಿ ಶುಲ್ಕ;

(ಬಿ) ಲೈಸೆನ್ಸ್ ನೀಡಲಾಗಿರುವ ಕಟ್ಟಡದ ಸುರಕ್ಷತೆಗಾಗಿ ಶುಲ್ಕ;

(ಸಿ) ನಿರ್ಮಾಣ ಅವಧಿಯಲ್ಲಿ ಸಾರ್ವಜನಿಕ ರಸ್ತೆಗಳ ನಿರ್ವಹಣೆಗಾಗಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ನಿರ್ಮಾಣ ಸಾಮಗ್ರಿಗಳನ್ನು ಸಂಗ್ರಹಿಸುವುದಕ್ಕಾಗಿ ಶುಲ್ಕ, ಎಂದರೆ, ನೆಲ ಬಾಡಿಗೆ;

(ಡಿ) ಮಂಜೂರಾದ ನಕ್ಷೆಗನುಸಾರವಾಗಿ ನಿರ್ಮಾಣ ಕೈಗೊಳ್ಳಲಾಗಿದೆಯೆ ಎಂಬುದನ್ನು ಖಚಿತಪಡಿಸಲು ಭದ್ರತಾ ಶುಲ್ಕ;

(ಇ) ಪ್ರಾರಂಭ ಪ್ರಮಾಣಪತ್ರಕ್ಕಾಗಿ ಶುಲ್ಕ;

(ಎಫ್) ಅಧಿಭೋಗ ಪ್ರಮಾಣಪತ್ರಕ್ಕಾಗಿ ಶುಲ್ಕ;

(ಜಿ) ನಿರ್ಮಾಣ ಕಾಮಗಾರಿಯ ಆರಂಭದಲ್ಲಿ ಪ್ರಾರಂಭ ಪ್ರಮಾಣಪತ್ರ ಪಡೆಯದಿರುವುದಕ್ಕಾಗಿ ಅಧಿಭೋಗ ಪ್ರಮಾಣಪ ತ್ರ ನೀಡಿಕೆಯ ಸಮಯದಲ್ಲಿ ವಿಧಿಸಿದ ದಂಡ;

(ಹೆಚ್) ಮಂಜೂರಾದ ನಕ್ಷೆಯ ಅಥವಾ ವಲಯ ನಿಯಂತ್ರಣ ಮಿತಿಯ ಸಂಬಂಧದಲ್ಲಿ ನಿರ್ಮಾಣದಲ್ಲಿನ ಉಲ್ಲಂಘನೆಯ ಅಥವಾ ಬದಲಾವಣೆಯನ್ನು ಕ್ರಮಬದ್ಧಗೊಳಿಸುವುದಕ್ಕಾಗಿ ಶೇಕಡ 5ರಷ್ಟರವರೆಗೆ ದಂಡ; ಮತ್ತು

(ಐ) ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದಂಥ ಇತರ ಶುಲ್ಕ.

**XX XX XX**

ಸರ್ಕಾರಿ ಮುದ್ರಣಾಲಯ, ಸುವರ್ಣ ವಿಧಾನಸೌಧ, ಬೆಳಗಾವಿ, ಪಿ7, ಕಾಸೂ , ಪ್ರತಿಗಳು 300, 13ನೇ ಡಿಸೆಂಬರ್ 2023

**KARNATAKA LEGISLATIVE COUNCIL**
**ONE HUNDRED AND FIFTY FIRST SESSION**

# THE BRUHAT BENGALURU MAHANAGARA PALIKE AND CERTAIN OTHER LAW (AMENDMENT) BILL, 2023

**(LA Bill No. 24 of 2023)**

**(As passed by the Karnataka Legislative Assembly)**

A Bill further to amend the Bruhat Bengaluru Mahanagara Palike Act, 2020 and the Karnataka Municipal Corporations Act, 1976.

Whereas it is expedient further to amend the Bruhat Bengaluru Mahanagara Palike Act, 2020 (Karnataka Act 53 of 2020) and the Karnataka Municipal Corporations Act, 1976 (Karnataka Act 14 of 1977) for the purposes hereinafter appearing;

Be it enacted by the Karnataka State Legislature in the seventy fourth year of the Republic of India as follows:-

**1. Short title and commencement.-** (1) This Act may be called the Bruhat Bengaluru Mahanagara Palike and Certain Other Law (Amendment) Act, 2023.

(2) The provisions of sections 2 and 3 shall deemed to have come into force with effect from 11.01.2021 and 04.09.2015 respectively.

**2. Amendment of the Karnataka Act 53 of 2020.-** In the Bruhat Bengaluru Mahanagara Palike Act, 2020 (Karnataka Act 53 of 2020),-

(i) In section 2,-

(a) after clause (26), the following shall be inserted, namely:-

"(26A) "Ground rent" means to include fees for usage of public roads and other infrastructure facilities provided and maintained by the Bruhat Bengaluru Mahanagara Palike and debris generated, during the period of construction, but this shall not give the right to occupy public road and footpath;

(26B) "Guidance Value" means market value of the vacant plot as specified under section 45B of the Karnataka Stamp Act, 1957;"

(b) after clause (49), the following shall be inserted, namely:-

"(49A) "Scrutiny fee" means fee collected to meet the establishment charges for processing the application for permitting building construction;"

(ii) In Chapter XIII, in the heading, after the word "Taxes", the words and punctuations "Fee, Levy, Charge and Demand" shall be inserted.

(iii) In section 142,-

(A) in the heading, after the word "Taxes", the words and punctuations "Fee, Levy, Charge and Demand or by whatever name it may be called," shall be inserted.

(B) in sub-section (1),-

(a) for the words "taxes at rates", the words and punctuations "taxes, fee, levy, charge, demand or by whatever name it may be called, at such rates" shall be substituted.

(b) after clause (d), the following shall be inserted, namely:-

"(d-i) any fee or levy or demand or charge for permitting building constructions."

(iv) In section 240A, in sub-section (3), in clause (A), for sub-clauses (a), (b), (c), (d), (e) and (f), the following shall be substituted, namely:-

"(a) fee for issuance of license at such rate not exceeding 0.30 percent of guidance value of the vacant plot under section 45B of the Karnataka Stamps Act, 1957 multiplied by the proposed built up area;

(b) fee for maintenance of public roads or storing of construction material in public places during construction viz. ground rent at such rate not exceeding 0.25 percent of guidance value of the vacant plot under section 45B of the Karnataka Stamps Act, 1957 multiplied by the proposed built up area;

(c) security fee deposit as specified in the zoning regulation for ensuring that the construction is in accordance with the plan sanctioned;

(d) fee for commencement certificate at such rate not exceeding 0.20 percent of guidance value of the vacant plot under section 45B of the Karnataka Stamps Act, 1957 multiplied by the proposed plinth area;

(e) fee for completion certificate at such rate not exceeding 1.0 percent of guidance value of the vacant plot under section 45B of the Karnataka Stamps Act, 1957 multiplied by the proposed built up area;

(f) such other fee as specified by the Government from time to time under this Act and the Karnataka Town and Country Planning Act, 1961 (Karnataka Act 11 of 1963) and the rules made there under;

(g) scrutiny fee at such rate not exceeding 0.10 percent of guidance value of the vacant plot under section 45B of the Karnataka Stamps Act, 1957 multiplied by the proposed built up area;

(h) penalty imposed at the time of issuance of completion certificate for not obtaining commencement certificate at the commencement of the construction at such rate not exceeding 0.25 percent of guidance value of the vacant plot under section 45B of the Karnataka Stamps Act, 1957multiplied by constructed built up area;

(i) penalty for regularisation of violated or deviated portion of construction up to the extent allowed under the Act at such rate not exceeding 35

percent of the guidance value of plot under section 45B of the Karnataka Stamps Act, 1957 for the violated portion; and

(j) such other fee as nay be specified by the Government from time to time.”

**3. Amendment of the Karnataka Act 14 of 1977.-** In the Karnataka Municipal Corporations Act, 1976 (Karnataka Act 14 of 1977),-

(i) In section 2,-

(a) after clause (13), the following shall be inserted, namely:-

“(13A) “Ground rent” means to include fees for usage of public roads and other infrastructure facilities provided and maintained by the Corporation and debris generated, during the period of construction, but this shall not give the right to occupy public road and footpath;

(13B) “Guidance Value” means market value of the vacant plot as specified under section 45B of the Karnataka Stamp Act, 1957;”

(b) after clause (37), the following shall be inserted, namely:-

“(37A) "Scrutiny fee” means fee collected to meet the establishment charges for processing the application for permitting building construction;”

(ii) In Chapter XV, in the heading, after the word “powers”, the words “including Town Planning” shall be inserted.

(iii) In section 299A, in sub-section (2),-

(a) after the words “the guidance value”, the words “of vacant plot” shall be inserted.

(b) for sub-clauses (a), (b), (c), (d), (e), (f), (g), (h) and (i), the following shall be substituted, namely:-

“(a) fee for issuance of license at such rate not exceeding 0.30 percent of guidance value of vacant plot under section 45B of the Karnataka Stamps Act, 1957 multiplied by proposed built up area;

(b) scrutiny fee of the building for which licence granted, at such rate not exceeding 0.10 percent of guidance value of the vacant plot under section 45B of the Karnataka Stamps Act, 1957 multiplied by proposed built up area;

(c) fee for maintanance usage of public roads, storing of construction materials in public places and other infrastructure facilities provided and maintained by the Corporation and the debris generated, during the period of construction viz. ground rent, at such rate not exceeding 0.25 percent of guidance value of the vacant plot under section 45B of the Karnataka Stamps Act, 1957 multiplied by proposed built up area;

(d) security fee deposit as specified in zoning regulation for ensuring that the construction is in accordance with the plan sanctioned;

(e) fee for commencement certificate at such rate not exceeding 0.20 percent of guidance value of the vacant plot under section 45B of the Karnataka Stamps Act, 1957 multiplied by the proposed plinth area;

(f) fee for occupancy certificate at such rate not exceeding 1.0 percent of guidance value of the vacant plot under section 45B of the Karnataka Stamps Act, 1957 multiplied by the proposed built up area;

(g) penalty imposed at the time of issuance of occupancy certificate for not obtaining commencement certificate at the commencement of the construction, at such rate not exceeding 0.25 percent of guidance value of the vacant plot under section 45B of the Karnataka Stamps Act, 1957 multiplied by constructed built up area;

(h) penalty for regularization up to 5 percent of violation or deviation in the construction with respect to the sanctioned plan or Zonal regulations limit specified at such rate not exceeding 35 percent of guidance value of the vacant plot under section 45B of the Karnataka Stamps Act, 1957 multiplied by the violated portion; and

(i) such other fee as specified by the Government from time to time under this Act and the Karnataka Town and Country Planning Act, 1961 (Karnataka Act 11 of 1963) and the rules made there under."

**4. Validation of Levy and collection of tax, cess, fee etc**.- Notwithstanding anything contained in any judgment, decree or order of any Court, Tribunal or other authority to the contrary levy, assessment or collection of any amount as tax, cess, fee etc. on building, vacant plot etc., tax, cess, fee etc. made or purporting to have been made and any action or thing taken or done (including any notices or orders issued or assessment made) and all proceedings held and any levy and collection of tax, cess, fee etc. purported to have been collected by way of tax, cess, fee etc. in relation to such levy assessment or collection under the provisions of the Principal Acts or any rules, notification, order, guidelines or letters before the commencement of the Bruhat Bengaluru Mahanagara Palike and Certain Other Law (Amendment) Act, 2023 shall be and shall be deemed to be valid and effective for all purposes as if such levy, assessment or collection or action or thing had been made, taken or done under the Principal Acts as amended by the Bruhat Bengaluru Mahanagara Palike and Certain Other Law (Amendment) Act, 2023 and accordingly,-

(a) all acts, proceedings or things done or any action taken by the Government or the officers of the Corporation, as the case may be, in connection with the levy, assessment or collection of any amount as fee for all purposes be deemed to be and to have always been made, done or taken in accordance with law;

(b) no suit or other proceeding shall be maintained or continued in any Court or Tribunal or before any authority for the refund of any such fee; and

(c) no Court shall enforce any decree or order directing the refund of any such fee."

## STATEMENT OF OBJECTS AND REASONS
**(As appended to at the time of introduction)**

It is considered necessary to amend the Bruhat Bengaluru Mahanagara Palike Act, 2020 (Karnataka Act 53 of 2020) and the Karnataka Municipal Corporations Act, 1976 (Karnataka Act 14 of 1977) to make provisions to specify the ratio of cess, scrutiny fee etc. with reference to the guidance value under the Karnataka Stamps Act, 1957 and give validity to the earlier collection of cess, scrutiny fee etc.

Hence, the Bill.

## FINANCIAL MEMORANDUM

There is no extra expenditure involved in the proposed Legislative Measure.

**D.K. SHIVAKUMAR**
Deputy Chief Minister

**K.R. MAHALAKSHMI**
Secretary
Karnataka Legislative Council

**ANNEXURE**

**THE EXTRACT FROM THE BRUHAT BENGALURU MAHANAGARA PALIKE ACT, 2020 (KARNATAKA ACT NO. 53 OF 2020)**

**XXX XXX XXX**

**2. Definitions.- XXX XXX XXX**

(26) "Government" means the Government of Karnataka;

**XXX XXX XXX**

(49) "Scheduled Tribes" means those tribes or tribal communities on parts of or groups within castes, races, tribes or tribal communities notified under Article 342 of the Constitution of India;

**XXX XXX XXX**

**CHAPTER XIII**

**TAXES**

**XXX XXX XXX**

**142. Taxes which may be imposed.-** (1) Subject to general and specific orders of the Government, the corporation may impose the following taxes at rates not exceeding those specified in the Act,-

(a) A tax on buildings or vacant land or both situated in the jurisdiction of the corporation.

(b) A tax on profession, trades, callings and employments.

(c) A tax on entertainments and amusements.

(d) A duty on certain transfers of property in the form of additional stamp duty.

(e) Any other taxes which may be assigned by law for the assessment and collection by the Corporation.

**XXX XXX XXX**

**240A. Levy of imposts, restriction and condition.-**

**XXX XXX XXX**

(3) The Chief Commissioner may for approving or sanctioning the plan or grant of commencement certificate or completion certificate,-

(A) charge and levy the following fee at such rates based on the market value fixed by the Department of Stamps and Registration under the provisions of the Karnataka Stamp Act, 1957, namely:-

(a) fee for issuance of license;

(b) fee for maintenance of public roads or storing of construction materials in public places during construction viz, ground rent;

(c) security fee ensuring that the construction is in accordance with plan sanctioned;

(d) fee for commencement certificate;

(e) fee for completion certificate; and

(f) such other fee as specified by the Government from time to time.

**XXX XXX XXX**

**THE EXTRACT FROM THE KARNATAKA MUNICIPAL CORPORATIONS ACT, 1976 (KARNATAKA ACT NO. 14 OF 1977)**

**XXX XXX XXX**

**2. Definitions.- XXX XXX XXX**

(13) "Government" means the State Government;

**XXX XXX XXX**

(37) "Scheduled Tribes" shall have the same meaning as in the Constitution of India;

**XXX XXX XXX**

**CHAPTER XV**

**REGULATION OF BUILDINGS**

**GENERAL POWERS**

**XXX XXX XXX**

**299A. Levy of imposts, restrictions and conditions in respect of Bruhat Bengaluru Mahanagara Palike.- XXX XXX XXX**

(2) The Commissioner may for approving or sanctioning the plan or grant of commencement certificate or completion certificate, charge and levy the following fee at such rates based on the market value fixed by the Department of Stamps and Registration under the provisions of the Karnataka Stamp Act, 1957, namely:-

(a) fee for issuance of license;

(b) fee for security of the building for which license granted;

(c) fee for maintenance of public roads or storing of construction materials in public places during construction viz, ground rent;

(d) security fee, ensuring that the construction is in accordance with plan sanctioned;

(e) fee for commencement certificate;

(f) fee for occupancy certificate;

(g) penalty imposed at the time of issuance of occupancy certificate for not obtaining commencement certificate at the commencement of the construction;

(h) penalty for regularization up to 5% of violation or deviation in the construction with respect to sanctioned plan or zonal regulation limit; and

(i) such other fee as specified by the Government from time to time.

**XXX XXX XXX**

Govt. Press, Suvarna Vidhana Soudha, Belgavi, 13TH Dec, 2023, P7, W.D. , Copies 300